ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

36

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನ ಮಂತ್ರಿಗಳು – ನೂತನ ಸಂಸತ್ ಭವನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 11-12-2020

# ಇನ್ನೆರಡು ವರ್ಷಗಳಲ್ಲೇ ಹೊಸ ಸಂಸತ್ ಭವನ

## ನೂತನ ಕಟ್ಟಡಕ್ಕೆ ಪ್ರಧಾನಿ ನರೇಂದ್ರ ಮೋದಿ ಶಿಲಾನ್ಯಾಸ



ಶೃಂಗೇರಿ ಮಠದ ಪುರೋಹಿತರ ಸಮ್ಮುಖದಲ್ಲಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಂಸತ್ ಭವನಕ್ಕೆ ಶಂಕುಸ್ಥಾಪನೆ ನೆರವೇರಿಸಿದರು.

**ನವದೆಹಲಿ:** 'ಹೊಸ ಸಂಸತ್ ಭವನದ ಶಿಲಾನ್ಯಾಸವು ಭಾರತದ ಪ್ರಜಾಸತ್ತಾತ್ಮಕ ಇತಿಹಾಸದಲ್ಲೇ ಒಂದು ಮೈಲುಗಲ್ಲಾಗಿದೆ. ಹಳೆಯ ಸಂಸತ್ ಭವನವು ಸ್ವಾತಂತ್ರ್ಯಾನಂತರದ ಭಾರತಕ್ಕೆ ಒಂದು ದಿಕ್ಕನ್ನು ತೋರಿಸಿಕೊಟ್ಟರೆ, ಹೊಸ ಭವನವು ಆತ್ಮನಿರ್ಭರ ಭಾರತದ ನಿರ್ಮಾಣಕ್ಕೆ ಸಾಕ್ಷಿಯಾಗಲಿದೆ.'

ಗುರುವಾರ ನವದೆಹಲಿಯಲ್ಲಿ ನೂತನ ಸಂಸತ್ ಭವನದ ಶಿಲಾನ್ಯಾಸ ನೆರವೇರಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಆಡಿರುವ ಮಾತಿದು. 'ಈ ಸಂಸತ್ ಭವನದಲ್ಲಿ ಹಲವು ಹೊಸತುಗಳಿರಲಿದ್ದು ಸಂಸದರ ಕಾರ್ಯಕ್ಷಮತೆ ಹೆಚ್ಚುವಂತೆ ಆಧುನಿಕ ವಿಧಾನಗಳನ್ನು ಬಳಸಲಾಗುತ್ತದೆ. ಭಾರತವು 75ನೇ ವರ್ಷದ ಸ್ವಾತಂತ್ರ್ಯೋತ್ಸವವನ್ನು ಆಚರಿಸುವ ವೇಳೆಗೆ ಹೊಸ ಸಂಸತ್ ಭವನದ ನಿರ್ಮಾಣವೂ ಪೂರ್ಣಗೊಳ್ಳಲಿದ್ದು ಅದು ದೇಶಕ್ಕೆ ಸ್ಫೂರ್ತಿ ನೀಡಲಿದೆ' ಎಂದೂ ಮೋದಿ ಹೇಳಿದ್ದಾರೆ.

2014ರಲ್ಲಿ ಪ್ರಜಾಸತ್ತೆಯ ದೇಗುಲವನ್ನು ಪ್ರವೇಶಿಸುವ ಮುನ್ನ ತಲೆಬಾಗಿ ನಮಸ್ಕರಿಸಿದ್ದೆ. ಆ ಕ್ಷಣವನ್ನು ಎಂದಿಗೂ ಮರೆಯಲಾರೆ. ನಂತರದ ದಿನಗಳಲ್ಲಿಯೂ ನಾನು ತಲೆಬಾಗಿಯೇ ಇದ್ದೆ ಎಂದೂ ಮೋದಿ ಸ್ಮರಿಸಿಕೊಂಡಿದ್ದಾರೆ.

**ಬಸವಣ್ಣನ ಅನುಭವ ಮಂಟಪದ ಪ್ರಸ್ತಾಪ:** ದೇಶದ ಪ್ರಜಾಸತ್ತಾತ್ಮಕ ಇತಿಹಾಸವನ್ನು ಸ್ಮರಿಸುತ್ತಾ ಪ್ರಧಾನಿ ಮೋದಿ ಬಸವಣ್ಣನವರ ಅನುಭವ ಮಂಟಪವನ್ನೂ ಪ್ರಸ್ತಾಪಿಸಿದ್ದಾರೆ. ಮ್ಯಾಗ್ನಾ ಕಾರ್ಟಾವನ್ನು 13ನೇ ಶತಮಾನದಲ್ಲಿ ಬರೆಯಲಾಗಿತ್ತು. ಆದರೆ, ಅದಕ್ಕೂ ಮೊದಲೇ ಅಂದರೆ 12ನೇ ಶತಮಾನದಲ್ಲೇ ಬಸವಣ್ಣನವರು ಅನುಭವ ಮಂಟಪದ ಮೂಲಕ ಜನಸಭೆಯ ಪರಿಕಲ್ಪನೆಯನ್ನು ಜಾರಿ ಮಾಡಿದ್ದರು ಎಂದು ಮೋದಿ ಹೇಳಿದರು. ಇದೇ ವೇಳೆ, 'ಅನುಭವ ಮಂಟಪ ಜನಸಭೆಯು ಒಟ್ಟು ರಾಷ್ಟ್ರದ ಉನ್ನತಿ ಮತ್ತು ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತದೆ. ಈ ಅನುಭವ ಮಂಟಪ ರಾಜ್ಯ, ರಾಷ್ಟ್ರದ ಉನ್ನತಿಗಾಗಿ ಕೆಲಸ ಮಾಡಲು ಪ್ರೇರಣೆ ನೀಡುತ್ತದೆ. ಅನುಭವ ಮಂಟಪ ರಾಷ್ಟ್ರದ ಹಿತಕ್ಕಾಗಿ ಕೆಲಸ ಮಾಡುತ್ತದೆ' ಎಂದು ಮೋದಿ ಕನ್ನಡದಲ್ಲೇ ಹೇಳಿದ್ದು ವಿಶೇಷವಾಗಿತ್ತು.

- 75ನೇ ಸ್ವಾತಂತ್ರ್ಯೋತ್ಸವದ ವೇಳೆ ನಿರ್ಮಾಣ ಕಾಮಗಾರಿ ಪೂರ್ಣ
- ಟಾಟಾ ಪ್ರಾಜೆಕ್ಟ್ಸ್‌ನಿಂದ ನಿರ್ಮಾಣ

| | |
|---|---|
| ಹೊಸ ಸಂಸತ್ ಭವನದ ಒಟ್ಟು ವಿಸ್ತೀರ್ಣ 64,500 ಚ.ಮೀಟರ್ | ನಿರ್ಮಾಣದ ಅಂದಾಜು ವೆಚ್ಚ 971 ಕೋಟಿ ರೂ. |
| ಕಾಮಗಾರಿ ಪೂರ್ಣ 2022 | ಪಾರ್ಕಿಂಗ್ 9612 ವಾಹನಗಳು |
| ಲೋಕಸಭೆಯಲ್ಲಿನ ಆಸನಗಳ ಸಂಖ್ಯೆ 888 | ರಾಜ್ಯಸಭೆ ಆಸನಗಳು 384 |

## ಶಂಕುಸ್ಥಾಪನೆಗೆ ಶೃಂಗೇರಿ ಶಾರದಾ ಪೀಠದ ಪೌರೋಹಿತ್ಯ

ವಿಶೇಷವೆಂದರೆ, ಸಂಸತ್ ಭವನ ಶಂಕುಸ್ಥಾಪನೆಯ ಎಲ್ಲ ಧಾರ್ಮಿಕ ವಿಧಿ ವಿಧಾನಗಳು ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ 6 ಮಂದಿ ಪುರೋಹಿತರಿಂದ ನೆರವೇರಿತು. ಪುರೋಹಿತರಾದ ಟಿ.ವಿ. ಶಿವಕುಮಾರ ಶರ್ಮ, ಕೆ.ಎಸ್. ಲಕ್ಷ್ಮೀನಾರಾಯಣ ಸೋಮಯಾಜಿ, ಕೆ.ಎಸ್. ಗಣೇಶ ಸೋಮಯಾಜಿ, ಸಿ.ನಾಗರಾಜ ಅಡಿಗ ಹಾಗೂ ದೆಹಲಿಯಲ್ಲಿರುವ ಶೃಂಗೇರಿ ಮಠದ ಶಾಖೆಯ ರಾಘವೇಂದ್ರ ಭಟ್ಟ ಮತ್ತು ಋಷ್ಯಶೃಂಗ ಭಟ ಅವರು ಭೂಮಿ ಪೂಜೆಗೆ ಸಂಬಂಧಿಸಿದ ಎಲ್ಲ ಪೂಜಾ ಕೈಂಕರ್ಯ ಕೈಗೊಂಡರು. ಶಿಲಾನ್ಯಾಸದ ಅಂಗವಾಗಿ ಗುರುವಾರ ಬೆಳಗ್ಗೆ ಗುರು ಪ್ರಾರ್ಥನೆ, ಗಣಪತಿ ಪೂಜೆ, ಪುಣ್ಯಾಹವಾಚನ, ಆದಿಶೇಷ ಪೂಜೆ, ಅನಂತ ಪೂಜೆ, ವರಾಹ ಪೂಜೆ ಮತ್ತು ಭುವನೇಶ್ವರಿ ಪೂಜೆ ನಡೆದವು. ಇದೇ ವೇಳೆ, ಶಿಲಾನ್ಯಾಸ ಕಾರ್ಯಕ್ರಮಕ್ಕಾಗಿ ಶ್ರೀ ಶಾರದಾ ಪೀಠದಲ್ಲಿ ತಯಾರಿಸಿದ ಶಂಕು ಮತ್ತು ನವರತ್ನವನ್ನು ದೆಹಲಿಗೆ ಕೊಂಡೊಯ್ಯಲಾಗಿತ್ತು.

> ಸ್ವಾವಲಂಬಿ ನವಭಾರತದ ಅಗತ್ಯತೆ, ಆಕಾಂಕ್ಷೆಗಳಿಗೆ ಅನುಗುಣವಾಗಿ 2022ರಲ್ಲಿ ನೂತನ ಸಂಸತ್ ಭವನ ಸಿದ್ಧವಾಗಲಿದೆ. ಸ್ವಾತಂತ್ರ್ಯೋತ್ತರ ಭಾರತದ ನೂತನ ಅಧ್ಯಾಯದ ಪ್ರಾರಂಭಕ್ಕೆ ಈ ಐತಿಹಾಸಿಕ ಕ್ಷಣ ಮುನ್ನುಡಿ ಬರೆದಿದೆ.
> [illegible]